ವಾರಾಂತ್ಯದ ವಿಶ್ರಾಮದ ಕನಸು ಕಾಣುತ್ತ ಕಾಲೇಜಿನಿಂದ ಮನೆಗೆ ಬಂದಾಗ, ಎಂದಿನಂತೆ ಗೌರಿ ಕಾಫಿ ಕಪ್ಪಿನೊಂದಿಗೆ ಹಾಜರಾಗದಿರುವುದು ಶಿರೀನ್‌ಗೆ ಅಚ್ಚರಿತಂದಿತ್ತು. ಎಲ್ಲರ ವೇಳಾಪಟ್ಟಿಯನ್ನು ಗಮನದಲ್ಲಿಟ್ಟುಕೊಂಡು ಬೇಕುಗಳನ್ನು ಪೂರೈಸುವ ಗೌರಿ ಈ ಮೊದಲೆಂದೂ ಹೀಗೆ ಮಾಡಿದವಳಲ್ಲ. ಮಕ್ಕಳಿಬ್ಬರೂ ಹಾಯಾಗಿ ಮಲಗಿದ್ದರು. ಕೋವಿಡ್‌ನಿಂದಾಗಿ ಕೋಣೆಯ ಮುಚ್ಚಿದ ಬಾಗಿಲ ಹಿಂದೆ ಇಯರ್‌ಫೋನ್ ಸಿಕ್ಕಿಸಿಕೊಂಡು ವರ್ಕ್ ಫ್ರಂ ಹೋಮ್‌ನಲ್ಲಿ ಮುಳುಗಿದ್ದ ಶಿಶಿರನಿಗೆ, ಬಾಲ್ಕನಿಯಲ್ಲಿ ಪೇಪರ್ ಹಿಡಿದು ಕುಳಿತಿದ್ದ ಮಾವನವರಿಗೆ ಅವಳೆಲ್ಲಿ ಎನ್ನುವುದು ಗೊತ್ತಿಲ್ಲ. ಅಂಗಡಿಯಿಂದ ಅರ್ಜೆಂಟಾಗಿ ಏನಾದರೂ ಸಾಮಾನು ತರುವುದಿದ್ದರೂ ಹೇಳದೇ ಹೋಗುವವಳಲ್ಲ. ಈಗಂತೂ ಕೋವಿಡ್ ಹಾವಳಿ... ಎಲ್ಲಿಗೆ ಹೋಗಿರಬಹುದು?

ಮತ್ತೂ ಒಂದು ಗಂಟೆ ಕಾಯ್ದರೂ ಗೌರಿಯ ಸುಳಿವಿಲ್ಲದಾದಾಗ, ಶಿರೀನ್ ಗಾಬರಿಯಾದಳು. ಅವಳ ಉಪಯೋಗಕ್ಕೆಂದೇ ಮನೆಯಲ್ಲಿಟ್ಟಿದ್ದ ಮೊಬೈಲ್ ಕೂಡ ಅಲ್ಲೇ ಬಿದ್ದಿದೆ. ಯಾವ ಸಾಮಾನೂ ಕಾಣೆಯಾಗಿಲ್ಲ. ಅವಳ ಬಟ್ಟೆಬರೆಗಳೂ ಹಾಗೇ ಇವೆ. ಇದ್ದಕ್ಕಿದ್ದಂತೆ ಎದ್ದು ಹೋಗುವಂಥದೇನಾಗಿರಬೇಕು? ಊರಿಗೇನಾದರೂ ಹೋದಳೆ? ಊರಿನಲ್ಲಿರುವ ತಮ್ಮ ರಾಜೂಗೆ ಫೋನಾಯಿಸಿ, ಒಂದಿಷ್ಟು ಗೌರಿಯ

